**ಕರ್ನಾಟಕ ಸರ್ಕಾರ**
**(ವಿದ್ಯುತ್ ಪರಿವೀಕ್ಷಣಾಲಯ)**

ಸಂ:ಮುವಿಪ/ಅಮುವಿಪ/ವಿಪ(ಪ)/ಪರೀಕ್ಷೆಗಳು/ 372-909 /2021-22

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಿರ್ಮಾಣ ಭವನ, 2ನೇ ಮಹಡಿ,
ಡಾ॥ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010.
ದಿನಾಂಕ: 14/07/2021

## ಅಧಿಸೂಚನೆ

ವಿಷಯ:- 2020-2021 ಮತ್ತು 2021-2022 ನೇ ಸಾಲಿನ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ರಹದಾರಿ ಹಾಗೂ ತಂತಿ ಕೆಲಸಗಾರರ ರಹದಾರಿ ನೀಡುವಿಕೆ ಪರೀಕ್ಷೆಗಳಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯುವ ಕುರಿತು.

**** **** ****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತೀ ಕೆಲಸಗಾರರ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿಗಳು) ನಿಯಮ 2012ರ ನಿಯಮ 20, 24 ಮತ್ತು 27ರ ಅಡಿಯಲ್ಲಿರುವಂತೆ ಈ ಕೆಳಕಂಡ ಪ್ರವರ್ಗಗಳ ಸಂಬಂಧದಲ್ಲಿ ಪರೀಕ್ಷೆಗಳಿಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಪ್ರವರ್ಗ | ಪರೀಕ್ಷಾ ಕೇಂದ್ರ | ಪರೀಕ್ಷಾ ಶುಲ್ಕ | | ಅರ್ಜಿಗಳನ್ನು ವಿತರಿಸುವ ದಿನಾಂಕ |
|---|---|---|---|---|---|
| | | | ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ | |
| 1 | ವಿದ್ಯುತ್ ಮೇಲ್ವಿಚಾರಕರು ಸಾಮಾನ್ಯ (ಗ್ರೇಡ್-2) | ಬೆಂಗಳೂರು ಮತ್ತು ಹುಬ್ಬಳ್ಳಿ | ರೂ 500/- | ರೂ. 250/- | 01.08.2021 ರಿಂದ 31.08.2021 ವರೆಗೆ |
| 2 | ವಿದ್ಯುತ್ ಮೇಲ್ವಿಚಾರಕರು ಗಣಿ (ಗ್ರೇಡ್-1) ಮತ್ತು (ಗ್ರೇಡ್-2) | ಹಟ್ಟಿ | ರೂ 500/- | ರೂ. 250/- | |
| 3 | ತಂತೀ ಕೆಲಸಗಾರರ (ಗ್ರೇಡ್-2) | ಬೆಂಗಳೂರು ಮತ್ತು ಹುಬ್ಬಳ್ಳಿ | ರೂ. 200/- | ರೂ. 100/- | |

1. ಪರೀಕ್ಷೆಗೆ ಹಾಜರಾಗಲು ಷರತ್ತು ಹಾಗೂ ನಿಯಮಗಳ ಸಮೇತವಾಗಿ ನಿರ್ಧಿಷ್ಟ ಆನ್‌ಲೈನ್ ಅರ್ಜಿಗಳನ್ನು ಸಾಮಾನ್ಯ ಅಭ್ಯರ್ಥಿಗಳು ರೂ 25/- ಅರ್ಜಿ ಶುಲ್ಕವನ್ನು ಮತ್ತು ಮೇಲ್ಕಾಣಿಸಿದ ಪರೀಕ್ಷಾ ಶುಲ್ಕವನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ 12.50/- ನ್ನು ಅರ್ಜಿ ಶುಲ್ಕ ಮತ್ತು ಮೇಲ್ಕಾಣಿಸಿದ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಿ ದಿ: <u>01.08.2021</u> ರಿಂದ <u>31.08.2021</u> ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಿ ತದನಂತರ ಸಂಬಂಧಪಟ್ಟ ಅರ್ಜಿದಾರರು ಅರ್ಜಿಯ ದಾಖಲಾತಿಗಳನ್ನು ಆಯಾ ಜಿಲ್ಲೆಯ/ಕ್ಷೇತ್ರಿಯ ಉಪ ವಿದ್ಯುತ್ ಪರಿವೀಕ್ಷಕರಿಗೆ ಪರಿಶೀಲನೆಗೆ ಸಲ್ಲಿಸಬಹುದು.
2. ಸ್ವೀಕರಿಸಿದ ಅರ್ಜಿಗಳನ್ನು ಆಯಾ ಜಿಲ್ಲೆಯ/ಕ್ಷೇತ್ರಿಯ ಉಪ ವಿದ್ಯುತ್ ಪರಿವೀಕ್ಷಕರುಗಳು ಬೆಂಗಳೂರು ಕೇಂದ್ರ ಕಚೇರಿಗೆ ಆನ್‌ಲೈನ್ ಮುಖಾಂತರ ದಿನಾಂಕ <u>15.09.2021</u> ರಂದು ಅಥವಾ ಅದಕ್ಕೆ ಮುಂಚಿತವಾಗಿ ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು.
3. ನಿಗಧಿಪಡಿಸಿದ ದಿನಾಂಕದ ನಂತರ ತಲುಪಿದ ಹಾಗೂ ಅಸಮರ್ಪಕ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪು.ತಿ.ನೋ-

**ಸೂಚನೆ:**

1. ಪರೀಕ್ಷೆಯ ಸರಿಯಾದ ದಿನಾಂಕ, ಸ್ಥಳ ಹಾಗೂ ಸಮಯವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.
2. ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ/ಅಪರ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ/ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ ಹಾಗೂ ವಿದ್ಯುತ್ ಪರಿವೀಕ್ಷಕರುಗಳ ಕಚೇರಿಗಳಿಗೆ ನೇರವಾಗಿ ಕಳುಹಿಸಿದಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

14/7/2021

ಸದಸ್ಯ ಕಾರ್ಯದರ್ಶಿಗಳು

ಬೆಂಗಳೂರು

ಪ್ರತಿಗಳನ್ನು ಮಾಹಿತಿಗಾಗಿ ಹಾಗು ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

1. ಎಲ್ಲಾ ಅಪರ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು.
2. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು.
3. ಎಲ್ಲಾ ವಿದ್ಯುತ್ ಪರಿವೀಕ್ಷಕರು.
4. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು.